ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1099(1516)
ಸದಸ್ಯರ ಹೆಸರು : ಶ್ರೀ ಧ್ರುವನಾರಾಯಣ. ಆರ್(ಸಂತೇಮರಳ್ಳಿ)
ಉತ್ತರಿಸುವ ಸಚಿವರು : ಶ್ರೀ ಎನ್.ಚಲುವರಾಯಸ್ವಾಮಿ(ಸಾರಿಗೆ ಸಚಿವರು.)

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳಲ್ಲಿ ಒಟ್ಟು ಎಷ್ಟು ವಾಣಿಜ್ಯ ಮಳಿಗೆಗಳಿವೆ (ವಿಭಾಗೀಯವಾರು ವಿವರ ನೀಡುವುದು);

ಒಟ್ಟು 2387 ವಾಣಿಜ್ಯ ಮಳಿಗೆಗಳಿರುತ್ತವೆ. (ವಿಭಾಗೀಯ ಮಾಹಿತಿಯನ್ನು ಅನುಬಂಧ 'ಎ'ನಲ್ಲಿ ನೀಡಲಾಗಿದೆ).

ಆ) ಸದರಿ ವಾಣಿಜ್ಯ ಮಳಿಗೆಗಳಿಗೆ ಪರವಾನಗಿಯನ್ನು ಯಾವ ಆಧಾರದ ಮೇಲೆ ಎಷ್ಟು ವರ್ಷಗಳ ಅವಧಿಗೆ ನೀಡಲಾಗುತ್ತಿದೆ;

ಸದರಿ ವಾಣಿಜ್ಯ ಮಳಿಗೆಗಳಿಗೆ, ಸಂಸ್ಥೆಯ ಸ್ಥಾಯಿ ಆದೇಶ ಸಂಖ್ಯೆ:492, ದಿನಾಂಕ:23.04.2001 ಹಾಗೂ ಸಾ.ಸ್ಥಾ.ಆ ಸಂಖ್ಯೆ:584, ದಿ: 05.11.06ಗಳ ನಿರ್ದೇಶನಗಳಂತೆ ಟೆಂಡರು/ಹರಾಜು ಮೂಲಕ ಆಯ್ಕೆ ಮಾಡಿ ಪರವಾನಗಿಯನ್ನು ನೀಡಲಾಗುತ್ತಿದೆ. ಖಾಲಿ ಸ್ಥಳದಲ್ಲಿನ ವಾಣಿಜ್ಯ ಮಳಿಗೆಗಳಿಗೆ ಮೂರು ವರ್ಷ ಹಾಗೂ ಶಾಶ್ವತ ಕಟ್ಟಡಗಳಲ್ಲಿನ ಮಳಿಗೆಗಳಿಗೆ ಐದು ವರ್ಷ ಗಳಿಗೆ ಅನುಮತಿ ನೀಡಲಾಗುತ್ತಿದೆ.

ಇ) ಸದರಿ ವಾಣಿಜ್ಯ ಮಳಿಗೆಗಳನ್ನು ಎಷ್ಟು ಮಂದಿ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದವರಿಗೆ ಪರವಾನಗೆದಾರರನ್ನಾಗಿ ಆಯ್ಕೆ ಮಾಡಲಾಗಿದೆ;

ಪರವಾನಗಿದಾರರನ್ನು ಹರಾಜು-ಕಂ-ಟೆಂಡರ್ ಮುಖಾಂತರ ಆಯ್ಕೆ ಮಾಡಿ ಹಂಚಿಕೆ ಮಾಡುವುದರಿಂದ ಯಾರು ಬೇಕಾದರೂ ಹರಾಜು-ಕಂ-ಟೆಂಡರಿನಲ್ಲಿ ಭಾಗವಹಿಸಿ ಮಳಿಗೆಗಳನ್ನು ಪಡೆಯಬಹುದಾಗಿರುತ್ತದೆ. ಆದಕಾರಣ ಆಯ್ಕೆಯಾದವರಲ್ಲಿ ಪರಿಶಿಷ್ಟಜಾತಿ/ಪರಿಶಿಷ್ಟ ವರ್ಗದವರ ಮಾಹಿತಿ ಲಭ್ಯವಿಲ್ಲ.

ಈ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ವಾಣಿಜ್ಯ ಮಳಿಗೆಗಳನ್ನು ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗದವರಿಗೆ ಮೀಸಲಿಡುವ ಕಾನೂನು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉದ್ಭವಿಸುವುದಿಲ್ಲ.

ಉ) ಬಂದಿದ್ದ ಪಕ್ಷದಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮವೇನು?

ಉದ್ಭವಿಸುವುದಿಲ್ಲ.